ಮೈಸೂರ ಗೆಜಿಟ

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 18, ಸನ್ 1887.

ಈ ಭಾಗವನ್ನು ಪ್ರತ್ಯೇಕ ಕೂರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಗೈರೇರಿಂದ ಕೊಡೋಣಾದ ಈಸ್ತಿಹಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜೂ ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿಸರ್ಡ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖೆ

ತಾರೀಖು 11ನೇ ಜೂನ್ 1887.

ಇದರಿಂದ ಪ್ರಸಿದ್ಧಪಡಿಸುವದೇನಂವರೆ, ಮೈಸೂರು ಡಿಸ್ಟ್ರಿಕ್ಟು ಸರಕಾರಿ ಜಂಗಲಿಗಳ 1886–87ನೇ ಸಾಲಿನ ವುತ್ಪತ್ತಿ ಬಾಬತು (ಸ್ವಲ್ಪ ಹೆಚ್ಚುಕಡಿಮೆ) 4,700 ಮಣ ಯಾ 783 ಪಲ್ಲಾಗಳ ಅಳಲೇಕಾಯಿಯು, ಮೈಸೂರು ವೋಡ್ಯಾರ್ಡಿನಲ್ಲಿ 1887ನೇ ಜೂನ್ 25ನೇ ಮರ್ತು ಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಷರತ್ತುಗಳು.

1. ಜಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು.
2. ಕ್ರಯದ ಮೊಬಲಗಿನ ನೈಕಿ ಶೇಕಡ 25 ರೂಪಾಯಿಗಳನ್ನು ಕ್ರಯದಾರನು ಹರಾಜ್ ದಿನದ ಲಾಗಾಯಿತು 3 ದಿನಗಳೊಳಗಾಗಿ ಖಜಾನೆಗೆ ಪಾವತೀ ಮಾಡತಕ್ಕದ್ದು.

3. ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಖಜಾನೆಗೆ ಪಾವತೀ ಮಾಡಲ್ಪಡತಕ್ಕದ್ದು.

4. ಕ್ರಯದ ಮೊಬಲಗು ಪೂರಾ ಪಾವತೀಯಾದ ನಂತರ ಅಳಲೆಕಾಯಿಯು ಕ್ರಯದಾರನಿಗೆ ತೂಕಮಾಡಿ ಕೊಡಲ್ಪಡುವದು.

5. ಮೇಲ್ಕಂಡ ಕಾಲದೊಳಗಾಗಿ ಶೇಕಡ 25 ರೂಪಾಯಿಯಂತೆ ತೀವಣಿಯು ಮತ್ತು ಬಾಕೀ ಮೊಬಲಗೂ ಪಾವತೀ ಮಾಡಲ್ಪಡದಿದ್ದರೆ, ಅಳಲೆಕಾಯಿಯು ಕ್ರಯದಾರನಿಗೆ ಲುಕ್ಸಾನಕರವಾಗಿ ಮರಳಿ ಸರಾಜುಹಾಕಲ್ಪಡುವದು. ಆದರೆ ಕ್ರಯದಾರನು ಆದರಿಂದುಂಟಾಗುವ ಫಾಯಿದೆಗೆ ಅರ್ಹನಾಗಿರುವದಿಲ್ಲ.

6. ಅಳಲೇಕಾಯಿಯು 30 ದಿನಗಳೊಳಗಾಗಿ ಸಾಗಿಸಲ್ಪಡದಿದ್ದರೆ ಹರಾಜು ತಾರೀಖು ಲಾಗಾಯಿತು ತಿಂಗಳು 1ಕ್ಕೆ ಯಾ ಅದರ ಭಾಗಕ್ಕೆ ಮಣ 1ಕ್ಕೆ 3 ಕಾಸಿನ ಪ್ರಕಾರ ಡಿಪೊಬಾಡಿಗೆಯು ವಸೂಲ್ಮಾಡಲ್ಪಡುವದು.

ಯಲ್. ರಿಕೆಟ್ಸ್,
ಫಾರೆಸ್ಟ್ಸುಗಳ ಇನ್ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 396.

ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿ ಹೊಮ್ಮದೇನಹಳ್ಳೀಲಿದ್ದ ಮೃತಪಟ್ಟ ಸಾದರ ತಿಮ್ಮಪ್ಪನ ಮಗ ವೆಂಕಟಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಸದರೀ ವೆಂಕಟಪ್ಪನ ಹೆಂಡತಿ ತಿಮ್ಮಮ್ಮ, ಮೃತಪಟ್ಟ ಸದರೀ ವೆಂಕಟಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಮ್ಮದೇನಹಳ್ಳಿ ಸ್ಥಳದ ತಿಮ್ಮಮ್ಮನು ಸದರೀ ಹೊಮ್ಮದೇನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸಾದರ ವೆಂಕಟಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ತಿಮ್ಮಮ್ಮನ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಾದರ ವೆಂಕಟಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 397.

ಬಾಗೇವಲ್ಲಿ ತಾಲ್ಲೂಕು ಗುಡಿಬಂಡೆ ರೇಂಜ್ ಗುಡಿಬಂಡೆ ಹೋಬಳಿ ಬ್ರಾಹ್ಮರಹಳ್ಳೀಲಿದ್ದ ಮೃತಪಟ್ಟ ವೆಂಕಟಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಮುನೆಮ್ಮನು, ಮೃತಪಟ್ಟ ಸದರೀ ವೆಂಕಟಂಣನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಬ್ರಾಹ್ಮರಹಳ್ಳಿ ಸ್ಥಳದ ಮುನೆಮ್ಮನು, ಸದರೀ ಬ್ರಾಹ್ಮರಹಳ್ಳಿ ವಾಸಸ್ಥನಾಗಿ ಮೃತಪಟ್ಟ ವೆಂಕಟಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮುನೆಮ್ಮನ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜೂನ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಹನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ.